## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **6 (02)** |
| ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸುವವರು | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಅದರಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆ: 9155 ಮತ್ತು ನೇರಪಾವತಿ ಪೌರಕಾರ್ಮಿಕರ ಸಂಖ್ಯೆ: 2127 ಸೇರಿ ಒಟ್ಟಾರೆ ಸಂಖ್ಯೆ: 11,282 ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಜಿಲ್ಲಾವಾರು ಮಾಹಿತಿ ಅನುಬಂಧ-1ರಲ್ಲಿ ಸಲ್ಲಿಸಿದೆ).<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016 ದಿನಾಂಕ: 07.08.2017 ರಲ್ಲಿ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಲಾಗಿರುವುದರಿಂದ ಹೊರಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. |
| (ಆ) | ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಲ್ಲಿ ಪ್ರತಿಯೊಬ್ಬ ಕಾರ್ಮಿಕ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ಕಾರ್ಮಿಕ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸಿರುತ್ತಾರೆ; ಸದರಿ ಕಾರ್ಮಿಕರ ಸರಾಸರಿ ಸೇವಾವಧಿ ಎಷ್ಟು; (ವಿವರ ನೀಡುವುದು) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರು ಇರುವುದಿಲ್ಲ.<br><br>ಸರ್ಕಾರದ ಆದೇಶ ಸಂ: ನಅಇ 126 ಟಿಎಂಎಸ್ 2016, ದಿನಾಂಕ: 07.08.2017 ರಲ್ಲಿ ರಾಜ್ಯದಲ್ಲಿನ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸುವುದನ್ನು ಸ್ಥಗಿತಗೊಳಿಸಲಾಗಿರುತ್ತದೆ. ಸದರಿ ಆದೇಶದನ್ವಯ ಆ ಸಂದರ್ಭದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಪೌರಕಾರ್ಮಿಕರನ್ನು ನೇರಪಾವತಿ ತರಲು ನಿರ್ದೇಶನ ನೀಡಲಾಗಿರುತ್ತದೆ. ಅದರನ್ವಯ ನೇರಪಾವತಿಗೆ ಅಳವಡಿಸಿಕೊಂಡು, ನಂತರ 2017, 2022, 2024ರ ಆದೇಶಗಳ ರೀತ್ಯಾ ಅರ್ಹ ಪೌರಕಾರ್ಮಿಕರನ್ನು ನೇರ ನೇಮಕಾತಿಗೆ ಒಳಪಡಿಸಲಾಗಿರುತ್ತದೆ ಹಾಗೂ ಉಳಿದವರನ್ನು ನೇಮಕಾತಿಗೊಳಿಸುವ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ. |
| (ಇ) | ಕನಿಷ್ಠ 3 ವರ್ಷಗಳಿಗಿಂತ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸಿದ ನೌಕರರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | 1. ಸರ್ಕಾರದ ಆದೇಶ ಸಂಖ್ಯೆ ನಅಇ 126 ಟಿಎಂಎಸ್ 2016 ದಿನಾಂಕ: 04.12.2017ರ ರೀತ್ಯಾ 2603 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. (ಅನುಬಂಧ-2)<br><br>2. ಸರ್ಕಾರದ ಆದೇಶ ಸಂಖ್ಯೆ ನಅಇ 176 ಜಿಇಎಲ್ 2022(ಭಾ-2)(ಇ) ದಿನಾಂಕ: 23.11.2022ರ ರೀತ್ಯಾ 4126 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. (ಅನುಬಂಧ-2)<br><br>3. ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024 (ಇ), ದಿನಾಂಕ: 27.09.2024 ರಲ್ಲಿ 1100 ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುವಂತೆ ಸದರಿ ಹುದ್ದೆಗಳನ್ನು ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಿ ಆಯಾ ಜಿಲ್ಲಾಧಿಕಾರಿಗಳ ಹಂತದಲ್ಲಿ ಅಗತ್ಯ ಕ್ರಮವಹಿಸಲು ದಿನಾಂಕ:23.10.2024 ರಲ್ಲಿ ನಿರ್ದೇಶನಾಲಯದಿಂದ ಆದೇಶಿಸಲಾಗಿರುತ್ತದೆ. ಅದರಂತೆ ಕೋಲಾರ, ಚಿತ್ರದುರ್ಗ, |

| | | |
|---|---|---|
| | | ದಾವಣಗೆರೆ, ಉತ್ತರಕನ್ನಡ ಮತ್ತು ಯಾದಗಿರಿ (05) ಜಿಲ್ಲೆಗಳಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಅದರಲ್ಲಿ ಕೋಲಾರ ಜಿಲ್ಲೆಯ ಕೋಲಾರ ನಗರಸಭೆಯಲ್ಲಿ 66 ಪೌರಕಾರ್ಮಿಕರನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ.<br><br>ಎತನ್ಮಧ್ಯೆ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 388 ಸೇನೆನಿ 2024, ದಿನಾಂಕ:25.11.2024ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಆದೇಶಿಸಲಾಗಿರುವುದರಿಂದ ಜಿಲ್ಲಾಧಿಕಾರಿಗಳ ಹಂತದಲ್ಲಿ ಅಧಿಸೂಚನೆ ಹೊರಡಿಸಿರುವುದಿಲ್ಲ. |
| (ಈ) | ಗುತ್ತಿಗೆ ಹಾಗೂ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರಿಗೆ ನೀಡುತ್ತಿರುವ ವೇತನ ಎಷ್ಟು? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016 ದಿನಾಂಕ: 07.08.2017 ರಲ್ಲಿ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಲಾಗಿರುತ್ತದೆ.<br><br>ನೇರಪಾವತಿ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು 2024-25 ನೇ ಸಾಲಿಗೆ ನಿಗದಿಪಡಿಸಿರುವ ಕನಿಷ್ಠ ವೇತನದ ಪ್ರಕಾರ ನಗರಸಭೆ ಗ್ರೇಡ್-1 ರೂ.**22,205**/-, ನಗರಸಭೆ ಗ್ರೇಡ್-2 ರೂ. **21,706**/- ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ರೂ. **21,208**/- ವೇತನ ನೀಡಲಾಗುತ್ತಿದ್ದು ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. |

ಇ-ಸಂಖ್ಯೆ: ನಅಇ 03 ಎಲ್‌ಸಿಕ್ಯೂ 2025 (ಇ)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ-01

| ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಮತ್ತು ನೇರ ಪಾವತಿ ಪೌರಕಾರ್ಮಿಕರ ಮಾಹಿತಿ | | | |
|---|---|---|---|
| ಕ್ರಸಂ | ಜಿಲ್ಲೆಯ ಹೆಸರು | ಖಾಯಂ ಪೌರಕಾರ್ಮಿಕರ ಸಂಖ್ಯೆ | ನೇರಪಾವತಿ ಪೌರಕಾರ್ಮಿಕರ ಸಂಖ್ಯೆ |
| 1 | ಬೆಳಗಾವಿ | 726 | 108 |
| 2 | ಬಾಗಲಕೋಟೆ | 626 | 22 |
| 3 | ಬೀದರ್ | 378 | 29 |
| 4 | ಬೆಂಗಳೂರು (ನಗರ) | 90 | 131 |
| 5 | ಚಾಮರಾಜನಗರ | 160 | 72 |
| 6 | ಚಿಕ್ಕಮಗಳೂರು | 198 | 123 |
| 7 | ಚಿತ್ರದುರ್ಗ | 251 | 71 |
| 8 | ದಾವಣಗೆರೆ | 132 | 56 |
| 9 | ಧಾರವಾಡ | 102 | 1 |
| 10 | ಹಾಸನ | 366 | 10 |
| 11 | ಹಾವೇರಿ | 346 | 102 |
| 12 | ಕಲಬುರಗಿ | 347 | 1 |
| 13 | ಕೊಡಗು | 63 | 15 |
| 14 | ಕೋಲಾರ | 326 | 149 |
| 15 | ಕೊಪ್ಪಳ | 234 | 123 |
| 16 | ಮಂಡ್ಯ | 296 | 99 |
| 17 | ಮೈಸೂರು | 445 | 46 |
| 18 | ರಾಮನಗರ | 207 | 99 |
| 19 | ಶಿವಮೊಗ್ಗ | 237 | 86 |
| 20 | ಉಡುಪಿ | 263 | 18 |
| 21 | ಯಾದಗಿರಿ | 231 | 57 |
| 22 | ಬಳ್ಳಾರಿ | 184 | 0 |
| 23 | ಉತ್ತರ ಕನ್ನಡ | 294 | 22 |
| 24 | ವಿಜಯಪುರ | 356 | 10 |
| 25 | ಚಿಕ್ಕಬಳ್ಳಾಪುರ | 213 | 83 |
| 26 | ತುಮಕೂರು | 290 | 56 |
| 27 | ದಕ್ಷಿಣ ಕನ್ನಡ | 238 | 87 |
| 28 | ವಿಜಯನಗರ | 449 | 57 |
| 29 | ರಾಯಚೂರು | 580 | 145 |
| 30 | ಗದಗ | 330 | 101 |
| 31 | ಬೆಂಗಳೂರು (ಗ್ರಾ) | 197 | 148 |
| | **GRAND TOTAL** | 9155 | 2127 |
| | | | |
| | | | |

ಅನುಬಂಧ -02

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಶೇಷ ನೇಮಕಾತಿಯಡಿ
ಭರ್ತಿಮಾಡಲಾಗಿರುವ ಪೌರಕಾರ್ಮಿಕರ ಮಾಹಿತಿ

| ಕ್ರಸಂ | ಜಿಲ್ಲೆಯ ಹೆಸರು | 2017 | 2022 | 2024 |
|---|---|---|---|---|
| 1 | ಬೆಳಗಾವಿ | 344 | 238 | |
| 2 | ಬಾಗಲಕೋಟೆ | 117 | 375 | |
| 3 | ಬೀದರ್ | 107 | 258 | |
| 4 | ಬೆಂಗಳೂರು (ನಗರ) | 8 | 175 | |
| 5 | ಚಾಮರಾಜನಗರ | 31 | 34 | |
| 6 | ಚಿಕ್ಕಮಗಳೂರು | 44 | 58 | |
| 7 | ಚಿತ್ರದುರ್ಗ | 74 | 78 | ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ. |
| 8 | ದಾವಣಗೆರೆ | 50 | 46 | ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ. |
| 9 | ಧಾರವಾಡ | 69 | 19 | |
| 10 | ಹಾಸನ | 109 | 172 | |
| 11 | ಹಾವೇರಿ | 82 | 157 | |
| 12 | ಕಲಬುರಗಿ | 212 | 19 | |
| 13 | ಕೊಡಗು | 18 | 17 | |
| 14 | ಕೋಲಾರ | 108 | 119 | 66<br>ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ. |
| 15 | ಕೊಪ್ಪಳ | 89 | 161 | |
| 16 | ಮಂಡ್ಯ | 85 | 103 | |
| 17 | ಮೈಸೂರು | 33 | 282 | |
| 18 | ರಾಮನಗರ | 44 | 107 | |
| 19 | ಶಿವಮೊಗ್ಗ | 47 | 85 | |
| 20 | ಉಡುಪಿ | 61 | 154 | |
| 21 | ಯಾದಗಿರಿ | 68 | 59 | ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ. |
| 22 | ಬಳ್ಳಾರಿ | 177 | 58 | |
| 23 | ಉತ್ತರ ಕನ್ನಡ | 50 | 174 | ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ. |
| 24 | ವಿಜಯಪುರ | 177 | 169 | |
| 25 | ಚಿಕ್ಕಬಳ್ಳಾಪುರ | 56 | 70 | |
| 26 | ತುಮಕೂರು | 83 | 143 | |
| 27 | ದಕ್ಷಿಣ ಕನ್ನಡ | 9 | 207 | |
| 28 | ವಿಜಯನಗರ | 0 | 195 | |
| 29 | ರಾಯಚೂರು | 152 | 181 | |
| 30 | ಗದಗ | 26 | 141 | |
| 31 | ಬೆಂಗಳೂರು (ಗ್ರಾ) | 73 | 72 | |
| | GRAND TOTAL | 2603 | 4126 | 66 |